ಜನವರಿ–ಮಾರ್ಚ–2019 ಬೆಲೆ: ರೂ 20. ಸಂಪುಟ : 1 ಸಂಚಿಕೆ : 1

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ


ಖಾಸಗಿ ಪ್ರಸಾರಕ್ಕಾಗಿ

# KRUSHI VANA

*trimonthly news* letter

January - March 2019 Price: Rs.20.00 ಬೆಲೆ: ರೂ.20.00


**ಕೃಷಿ**–ಅರಣ್ಯ ರೈತರ ಮತ್ತು ತಂತ್ರಜ್ಞಾನ ಸಂಸ್ಥೆಯ ಐದನೇ ಸರ್ವಸದಸ್ಯರ ಸಭೆಗೆ 2017–18ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸಲು ಹರ್ಷಿಸುತ್ತೇನೆ. ದಿನಾಂಕ 17–09–2013 ರಂದು ಬೆಂಗಳೂರು ನಗರ ಜಿಲ್ಲೆಯ ಸಂಘ ಸಂಸ್ಥೆಯ ನೊಂದಣಾಧಿಕಾರಿ ಕಛೇರಿಯಲ್ಲಿ ನೊಂದಣಿ ಮಾಡಿಕೊಂಡು ಕಳೆದ ಐದು ವರ್ಷಗಳಲ್ಲಿ ಸಂಸ್ಥೆಯ ಧ್ಯೇಯೋದ್ದೇಶಗಳ ಪ್ರಕಾರ ರಾಜ್ಯಾದ್ಯಂತ ಕೃಷಿ–ಅರಣ್ಯ ವೃದ್ಧಿ ಮಾಡಲು ಅನೇಕ ಅರಿವು ಮೂಡಿಸುವ ಕಾರ್ಯಾಗಾರಗಳನ್ನು ಹಮ್ಮಿಕೊಂಡು ಗ್ರಾಮೀಣ ಹಸಿರುಕರಣಕ್ಕೆ ಪ್ರಶಂಸನೀಯ ಸೇವೆ ಸಲ್ಲಿಸಿರುವ ತೃಪ್ತಿ ಸಂಸ್ಥೆಗಿದೆ. ಈ ಕಾರ್ಯಸಾಧನೆಗೆ ಕರ್ನಾಟಕ ಅರಣ್ಯ ಇಲಾಖೆ ಜಿಲ್ಲಾ ಪಂಚಾಯಿತಿ ಕೃಷಿ ವಿಶ್ವವಿದ್ಯಾಲಯಗಳು, ಕೃಷಿ ವಿಜ್ಞಾನ ಕೇಂದ್ರಗಳು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಹಾಗೂ ಅನೇಕ ಗ್ರಾಮೀಣ ಪ್ರದೇಶದಲ್ಲಿನ ಸರ್ಕಾರೇತರ ಸಂಸ್ಥೆಗಳು ಮತ್ತು ರೈತರು ನೆರವು ಕೊಟ್ಟಿದ್ದು ಅವರೆಲ್ಲರಿಗೂ ನಮ್ಮ ನಮನಗಳನ್ನು ಸಲ್ಲಿಸುತ್ತೇನೆ.



ಶ್ರೀ ಎ.ಎಸ್. ಸದಾಶಿವಯ್ಯ ಐ.ಎಫ್.ಎಸ್(ನಿ.)

ಶ್ರೀ.ಸದಾಶಿವಯ್ಯನವರು 11–12–2018 ರಂದು ನಮ್ಮನ್ನಗಲಿರುತ್ತಾರೆ. ಅವರಿಗೆ ಕೃಷಿ–ಅರಣ್ಯ ರೈತರ ಮತ್ತು ತಂತ್ರಜ್ಞಾನ ಸಂಸ್ಥೆಯ ಆಡಳಿತ ಮಂಡಳಿಯ ಎಲ್ಲ ಸದಸ್ಯರು ಮತ್ತು ರೈತ ಸದಸ್ಯರಿಂದ ಶ್ರದ್ಧಾಂಜಲಿ ನಮನ

ಶ್ರೀ.ಸದಾಶಿವಯ್ಯನವರು ಕೊನೆಯದಾಗಿ ತಮ್ಮ ಉಸಿರಾಗಿದ್ದ ಸಂಸ್ಥೆಯ ಸರ್ವಸದಸ್ಯರ ಸಭೆಗೆ ಬರೆದಿದ್ದ ತಮ್ಮ ಕೈಬರಹದಲ್ಲಿ ಪತ್ರ





# ಕೃಷಿ ಅರಣ್ಯ – ರೈತರಿಗೊಂದು ಆಶಾಕಿರಣ





ಕರ್ನಾಟಕದಲ್ಲಿ ಶತಮಾನಗಳ ಹಿಂದಿನಿಂದಲೂ, ಇಂದಿಗೂ ರಾಜ್ಯದ ಬಹುಪಾಲು ಜನರ ಮೂಲ ಕಸುಬು "ಕೃಷಿ". ರಾಜ್ಯದ ಬಹುಪಾಲು ಜನರ ಜೀವನೋಪಾಯವಾಗಿ ಮುಂದುವರೆದಿರುವ ಕೃಷಿ ಕ್ಷೇತ್ರ; ನಮ್ಮ ಜನರ ಆಲೋಚನೆ ಪರಿಕಲ್ಪನೆ ಸಂಸ್ಕೃತಿ ಮತ್ತು ಆರ್ಥಿಕತೆಯ ಮೇಲೆ ಹೆಚ್ಚಿನ ಪರಿಣಾಮ ಬೀರಿದೆ. "ಕೃಷಿತೋ ನಾಸ್ತಿ ದುರ್ಭಿಕ್ಷಂ"–ನಂತೆ ನಮ್ಮ ನಾಡಿನ ರೈತಸಮುದಾಯವು ಇಂದಿಗೂ ಕೃಷಿಯ ಬಗ್ಗೆ ಜಾಗೃತವಾಗಿದ್ದು, ಕೃಷಿ ವೃತ್ತಿಯ ಬಗ್ಗೆ ಗೌರವ, ಕಾಳಜಿ ಮುಂದುವರೆದಿದೆ.

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯು ಅಸ್ತಿತ್ವದಲ್ಲಿದ್ದು, ರೈತರ ಅಭಿವೃದ್ಧಿಗಾಗಿ ಮತ್ತು ಅರಣ್ಯಗಳನ್ನು ಉಳಿಸಿ ಬೆಳೆಸಿವುದಕ್ಕಾಗಿ ಇರುವಂತಹ ಈ ಸಂಸ್ಥೆಯು ಮರ ಬೆಳೆಸುವ ಮೂಲಕ ರೈತರ ಮತ್ತು ರಾಜ್ಯದ ಸಮೃದ್ಧಿ ಮತ್ತು ರಾಜ್ಯದ ಸರ್ವತೋಮುಖ ಅಭಿವೃದ್ಧಿ, ಕರ್ನಾಟಕ ರೈತರ ವ್ಯವಸಾಯಕ್ಕೆ ಅಯೋಗ್ಯವಾದ ಬೀಳು ಭೂಮಿಯಲ್ಲಿಯೂ ಬೆಲೆ ಬಾಳುವ ಮರಗಳನ್ನು ಬೆಳೆಸಿ ಗ್ರಾಮೀಣ ಕುಟುಂಬಗಳ ಏಳ್ಗೆಗೂ ಪರಿಸರ ಸಂತುಲನಕ್ಕೂ ಅವಕಾಶ ಮಾಡಿ ಮರಗಳ ಸಹಾಯದಿಂದ ರಾಜ್ಯದ ಅಭಿವೃದ್ಧಿಗೆ ಸಹಾಯಕವಾಗುವ ಯೋಜನೆಗಾಗಿ ಸ್ಥಾಪಿಸಿರುವ ಸಂಸ್ಥೆಯಿದು.

ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾದ ಹಸಿವನ್ನು ನೀಗಿಸುವವನೇ ರೈತ. ನಾವೂ ಏನೇ ಆಹಾರ ತಿಂದರೂ ಅದರ ಹಿಂದೆ ರೈತನ ಶ್ರಮವಿದೆ ಎನ್ನುವುದನ್ನು ಮರೆಯುವಂತಿಲ್ಲ. ಇತ್ತೀಚೆಗೆ ಆರ್ಥಿಕ ಹಿಂಜರಿತಕ್ಕೆ ಭಾರತ ಸಿಲುಕಿರುವುದಕ್ಕೆ ಕೃಷಿ ಪ್ರಮಾಣ ಕಡಿಮೆಯಾಗಿರುವುದೇ ಕಾರಣ ಎನ್ನಲಾಗುತ್ತಿದೆ. ಇದನ್ನು ನೋಡಿದಾಗ ರೈತನ ಅವಶ್ಯಕತೆ, ಪ್ರಾಮುಖ್ಯತೆ ಅರಿವಾಗುತ್ತದೆ.

ಸಂಸ್ಥೆಯು ಕರ್ನಾಟಕ ಅರಣ್ಯ ಇಲಾಖೆ, ಸಾಮಾಜಿಕ ಅರಣ್ಯ, ಕೃಷಿ ಅರಣ್ಯ, ಪ್ರೋತ್ಸಾಹ ಯೋಜನೆ, ಶಾಲಾ ಕೃಷಿ ಅರಣ್ಯ ಯೋಜನೆ, ಕೃಷಿ ಸಮುದಾಯ ಯೋಜನೆ ಮತ್ತು ಇತರ ಕೃಷಿ ಅರಣ್ಯ ಯೋಜನೆಗಳನ್ನು ಕಾರ್ಯಗತಗೊಳಿಸಲು ಸರ್ಕಾರದ ಇಲಾಖೆಗಳೊಡನೆ ಸಮಾಜದ ವಿವಿಧ ಸಂಘ ಸಂಸ್ಥೆಗಳು ಹಾಗು ಸರ್ಕಾರದ ಸಂಘ ಸಂಸ್ಥೆಗಳೊಡನೆ ಕೈಜೋಡಿಸುತ್ತಿದೆ.

ರೈತರು ತಾವು ಬೆಳೆಯುವ ಆಹಾರ ಬೆಳೆಗಳ ನಡುವೆ ಆರ್ಥಿಕ ಶಕ್ತಿ ನೀಡುವ ಕೃಷಿ ಅರಣ್ಯವನ್ನು ಹಮ್ಮಿಕೊಳ್ಳಲು ರೈತರಿಗೆ ಮನವರಿಕೆ ಹಾಗು ಪ್ರೇರಣೆ ನೀಡಲು ಸಂಕಿರಣಗಳನ್ನು ಹಮ್ಮಿಕೊಳ್ಳುವುದಲ್ಲದೆ ಗ್ರಾಮಗಳಲ್ಲಿ ಕೃಷಿ ಅರಣ್ಯದ ಬಗ್ಗೆ ನಿರಂತರವಾಗಿ ಅರಿವು ಮೂಡಿಸಲು ಹಲವು ಕಾರ್ಯಕ್ರಮಗಳನ್ನು ಕರ್ನಾಟಕದ ವಿವಿದೆಡೆ ಯಶಸ್ವಿಯಾಗಿ ನಡೆಸಲಾಗಿದೆ.

ನಮ್ಮ ದೇಶದಲ್ಲಿ ಕೃಷಿಯನ್ನು ಒಂದು ಉದ್ದಿಮೆಯಾಗಿ ಪರಿಗಣಿಸಿಲ್ಲ. ಇದರಲ್ಲಿ ಇನ್ನೂ ಹೆಚ್ಚಾಗಿ ನೀರಾವರಿ ಸೌಲಭ್ಯಗಳನ್ನು ಅಳವಡಿಸಿಕೊಳ್ಳಲು, ಸಾಂಪ್ರದಾಯಿಕ ಕೃಷಿ ಹೊರತಾಗಿ– ತರಕಾರಿ ಬೆಳೆಗಳು, ತೋಟಗಾರಿಕೆ ಬೆಳೆಗಳು, ಹೂವಿನ ಬೆಳೆಗಳು, ಔಷಧಿ ಸಸ್ಯಗಳು. ಇವುಗಳನ್ನು ಸಹಕಾರ ಪದ್ಧತಿಯಲ್ಲೂ ಬೆಳೆವಂತಾದರೆ ಸಾಕಷ್ಟು ಪ್ರಗತಿ ಸಾಧ್ಯವಿದೆ. ಕೆಲವು ಬೆಳೆಗಳಿಗೆ ಪರ್ಯಾಯಗಳನ್ನು ಕಂಡುಕೊಳ್ಳಬೇಕಾಗಿದೆ.

ಯಾವ ಬೆಳೆ ಯಾರು ಎಷ್ಟೆಷ್ಟು ಬೆಳೆಯಬೇಕು ಎನ್ನುವುದರ ಬಗ್ಗೆ ನಮ್ಮಲ್ಲಿ ಸರಿಯಾದ ನೀತಿಗಳು ಇಲ್ಲದ ಕಾರಣ ಎಲ್ಲರೂ ಒಂದೇ ರೀತಿಯ ಬೆಳೆ ಬೆಳೆಯುವುದರ ಮೂಲಕ ಸರಿಯಾದ ಬೆಲೆ ಸಿಗುತ್ತಿಲ್ಲ. ಇವೆಲ್ಲವುಗಳನ್ನು ಗಮನಿಸಿದಾಗ ಸಮಗ್ರವಾದ ರೈತರ ಪರವಾದ ಕೃಷಿ ನೀತಿಯ ಕೊರತೆ ಕಾಣಿಸುತ್ತಿದೆ. ದೇಶದ ಬೆನ್ನಲುಬು ರೈತ ಎನ್ನುತ್ತಾ ನಾವೆಲ್ಲರೂ ಸೇರಿ ಆತನ ಬೆನ್ನೆಲುಬನ್ನೇ ಮುರಿಯಲು ಹೊರಟಿದ್ದೇವೆ. ಪರಿಣಾಮ ರೈತ ಆತ್ಮಹತ್ಯೆಯ ದಾರಿ ಹಿಡಿಯುತ್ತಿದ್ದಾನೆ. ಭಾರತದಲ್ಲಿ ರೈತರ ಆತ್ಮಹತ್ಯೆಯ ಸಂಖ್ಯೆ ಹೆಚ್ಚುತ್ತಿರುವುದು, ಹಾಗೂ ರೈತನ ಪರಿಸ್ಥಿತಿ ಗಮನಿಸಿ ಇಂದಿನ ಪೀಳಿಗೆ ಕೃಷಿ ಮಾಡಲು ಮುಂದೆ ಬರದೆ ಇರುವುದು ನಿಜಕ್ಕೂ ಕಳವಳಕಾರಿ. ಕೃಷಿ ಮತ್ತು ಕೃಷಿಕ ಉತ್ತಮಗೊಳ್ಳಲು ಏನು ಮಾಡಬೇಕು? ಇದಕ್ಕೆ ಇವತ್ತಿನ ದಿನದಲ್ಲಿ ಉತ್ತರ ಕಷ್ಟಕರವಾದುದು. ರೈತನಾದವನು ಮೊದಲು ತನ್ನ ಕೃಷಿ ಚಟುವಟಿಕೆಗಳಿಗೆ ಪರಾವಲಂಬಿಯಾಗಬಾರದು. ತನ್ನ ಭೂಮಿಗೆ ಬೇಕಾದ ಬೀಜಗಳನ್ನು ಗೊಬ್ಬರಗಳನ್ನು ತಾನೇ ಉತ್ಪಾದಿಸಿ ಕೊಳ್ಳುವಂತಾಗಬೇಕು. ಇವೆಲ್ಲ ಕಾರಣಗಳಿಗೊಂದು ಪರಿಹಾರ ನೀಡುವತ್ತ ಹೆಜ್ಜೆಯನ್ನು ನಾವಿಡಬೇಕಾಗಿದೆ.

– ಶ್ರೀ.ಎ.ಎಸ್.ಸದಾಶಿವಯ್ಯ(ನಿವೃತ್ತ ) ಭಾ.ಅ.ಸೇ
ಸಂಪಾದಕರು

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

Volume : 1 Issue : 1
ಸಂಪುಟ : 1 ಸಂಚಿಕೆ : 1

## ಸಂಪಾದಕ ಮಂಡಳಿ

**ಗೌರವ ಸಂಪಾದಕರು**

ಶ್ರೀ ಎನ್.ಸಂಪಗಿ, ಭಾ.ಅ.ಸೇ(ನಿ)

**ಸಂಪಾದಕರು**

ಶ್ರೀ ಎ.ಎಸ್.ಸದಾಶಿವಯ್ಯ, ಭಾ.ಅ.ಸೇ(ನಿ)

**ಸದಸ್ಯರು**

ಶ್ರೀ ಎ.ಎಂ.ಅಣ್ಣಯ್ಯ, ಭಾ.ಅ.ಸೇ(ನಿ)
ಡಾ. ಎನ್.ಸ್ವಾಮಿ ರಾವ್
ಡಾ. ಎಮ್. ಮಹಾದೇವ ಮೂರ್ತಿ.
ಶ್ರೀಮತಿ ಶೋಭಾ.ಎಚ್.ಜಿ

**ಕಛೇರಿ ವಿಳಾಸ:**

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ)
ವನವಿಕಾಸ, ನೆಲಮಹಡಿ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560003
ದೂ: 080 23566126
Email: iaftbangalore@gmail.com

Publisher : **IAFT**
**Editor- A.S.Sadashivaiah**
**KRUSHI VANA**
***trimonthly news* letter**
**January to March 2019**
Printed by : **S.K.CHANDRASHEKAR,**
**Rathna Offset Printers, #.120,**
**1st Main Road,**
**Cavery Nadhi Road,**
**Bridavan Nagar,**
**Bangalore-560019**

## ಸುಭಾಷಿತ

ಸೋಲೆಂಬ ರೋಗಕ್ಕೆ ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮವೇ ದೊಡ್ಡ ಮದ್ದು ಇದು ಯಾರಲ್ಲಿರುತ್ತದೆಯೋ ಅವರಿಗೆ ಯಶಸ್ಸು ಕಟ್ಟಿಟ್ಟಬುತ್ತಿ. -ಅಬ್ದುಲ್ ಕಲಾಂ

## ಸದಸ್ಯತ್ವ.

ಸಂಸ್ಥೆಯ ಸದಸ್ಯತ್ವ ಎನ್ನುವಂತಹದ್ದು ಸಂಸ್ಥೆ / ವೈಯಕ್ತಿವಾಗಿ ಶಾಸ್ತ್ರೀಯ ಅರಣ್ಯೀಕರಣ ಯೋಜನೆಯಲ್ಲಿ ಆಸಕ್ತಿ ಹೊಂದಿದ್ದವರಿಗೆ ತೆರೆದಿರುತ್ತದೆ.

| ಸದಸ್ಯತ್ವದ ಕ್ರಮ | ಪ್ರವೇಶ ಶುಲ್ಕ |
|---|---|
| ಸಾಂಸ್ಥಿಕ ಸದಸ್ಯತ್ವ | 25,000.00 ರೂ |
| ಆಶ್ರಯದಾತ ಸದಸ್ಯತ್ವ | 20,00.00 ರೂ |
| ಜೀವಮಾನ ಸದಸ್ಯತ್ವ | 5,000.00 ರೂ |
| ಭಾಗೀದಾರ ಸದಸ್ಯತ್ವ | 2,000.00 ರೂ |
| ಸಾಮಾನ್ಯ ಸದಸ್ಯತ್ವ | 100.00 ರೂ |

ಚಂದಾ ವಿವರಗಳು - ಅಂಚೆವೆಚ್ಚ ಸೇರಿ
ಬಿಡಿ ಪ್ರತಿ: ರೂ. 30
ವಾರ್ಷಿಕ : ರೂ. 140

**ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ)**
**ವನವಿಕಾಸ, ನೆಲಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ,**
**ಬೆಂಗಳೂರು-560003**

ಮನವಿ:

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ), ಯು ಅಸ್ತಿತ್ವದಲ್ಲಿದ್ದು, ರೈತರ ಅಭಿವೃದ್ಧಿಗಾಗಿ ಮತ್ತು ಅರಣ್ಯಗಳನ್ನು ಉಳಿಸಿ ಬೆಳೆಸಿವುದಕ್ಕಾಗಿ ಇರುವಂತಹ ಈ ಸಂಸ್ಥೆಯು ಮರ ಬೆಳೆಸುವ ಮೂಲಕ ರೈತರ ಮತ್ತು ರಾಜ್ಯದ ಸಮೃದ್ಧಿ ಮತ್ತು ರಾಜ್ಯದ ಸರ್ವತೋಮುಖ ಅಭಿವೃದ್ಧಿ, ಕರ್ನಾಟಕ ರೈತರ ವ್ಯವಸಾಯಕ್ಕೆ ಆಯೋಗ್ಯವಾದ ಬೀಳು ಭೂಮಿಯಲ್ಲಿಯೂ ಬೆಲೆ ಬಾಳುವ ಮರಗಳನ್ನು ಬೆಳೆಸಿ ಗ್ರಾಮೀಣ ಕುಟುಂಬಗಳ ಏಳ್ಗೆಗೂ ಪರಿಸರ ಸಂತುಲನಕ್ಕೂ ಅವಕಾಶ ಮಾಡಿ ಮರಗಳ ಸಹಾಯದಿಂದ ರಾಜ್ಯದ ಅಭಿವೃದ್ಧಿಗೆ ಸಹಾಯಕವಾಗುವ ಯೋಜನೆಗಾಗಿ ಸ್ಥಾಪಿಸಿರುವ ಸಂಸ್ಥೆಯಿದು.

ಇಲ್ಲಿ ಸ್ವಯಂ ಇಚ್ಛೆಯಿಂದ ಸೇವೆ ಮಾಡಲಿಚ್ಛಿಸುವ ಯಾವುದೇ ನಿವೃತ್ತರು, ಹಿರಿಯ ನಾಗರಿಕರು ಈ ಕೆಳಗಿನ ವಿಳಾಸವನ್ನು ಮತ್ತು ದೂರವಾಣಿಯನ್ನು ಸಂಪರ್ಕಿಸಬಹುದು.

ಶ್ರೀ. ಎ.ಎಂ. ಅಣ್ಣಯ್ಯ,ಭಾ.ಅ.ಸೇ(ನಿ)
ಕಾರ್ಯದರ್ಶಿ
ಕೃಷಿ-ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ)
ದೂ: 9448019306

# ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ– ಒಂದು ಪರಿಚಯ

ಶೋಭಾ.ಹೆಚ್.ಜಿ, ಬೆಂಗಳೂರು

ಕರ್ನಾಟಕ ರಾಜ್ಯದಲ್ಲಿ ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದರ ಜೊತೆ ಜೊತೆಯಲ್ಲಿ ಕೃಷಿ ಅರಣ್ಯವನ್ನು ಅಳವಡಿಸಿಕೊಳ್ಳಲು ರೈತರನ್ನು ಪ್ರೋತ್ಸಾಹಿಸುವುದು ಮತ್ತು ತಾಂತ್ರಿಕ ಸಲಹೆಗಳನ್ನು ನೀಡುವ ಉದ್ದೇಶವನ್ನಿರಿಸಿಕೊಂಡು ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞನ ಸಂಸ್ಥೆ ಬೆಂಗಳೂರು 2009ರಿಂದ ಕಾರ್ಯನಿರ್ವಹಿಸುತ್ತಿದ್ದೆ.

ಆ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದಲ್ಲಿ ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದರ ಜೊತೆ ಜೊತೆಯಲ್ಲಿ ಕೃಷಿ ಅರಣ್ಯವನ್ನು ಅಳವಡಿಸಿಕೊಳ್ಳಲು ರೈತರನ್ನು ಪ್ರೋತ್ಸಾಹಿಸುವುದು ಮತ್ತು ತಾಂತ್ರಿಕ ಸಲಹೆಗಳನ್ನು ನೀಡುವ ಉದ್ದೇಶವನ್ನಿರಿಸಿಕೊಂಡು ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ ಬೆಂಗಳೂರು 2009 ರಲ್ಲಿ ಹೆಜ್ಜೆ ಇಟ್ಟದ್ದು ಇಂದು ದೀರ್ಘ ಯಾತ್ರೆಯಾಗಿದೆ, ಅದಕ್ಕೆ ನಮ್ಮ ನಿವೃತ್ತ ಅರಣ್ಯ ಇಲಾಖೆಯ ಅಧಿಕಾರಿಗಳು, ನಿವೃತ್ತ ಐ.ಎ.ಎಸ್. ಅಧಿಕಾರಿಗಳು, ನಿವೃತ್ತ ಕುಲಪತಿಗಳು, ಕುಲಸಚಿವರುಗಳು, ಕೆಲ ಸ್ವಯಂ ಸೇವಾ ಸಂಸ್ಥೆಗಳು ಹಲವು ಸ್ವಯಂ ಸೇವಾವ್ರತಿಗಳು ಸೇರಿದ್ದಾರೆ.



ಸಂಸ್ಥೆಯು ಕರ್ನಾಟಕ ಅರಣ್ಯ ಇಲಾಖೆ, ಸಾಮಾಜಿಕ ಅರಣ್ಯ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ, ಶಾಲಾ ಕೃಷಿ ಅರಣ್ಯ ಯೋಜನೆ, ಕೃಷಿ ಸಮುದಾಯ ಯೋಜನೆ ಮತ್ತು ಇತರ ಕೃಷಿ ಅರಣ್ಯ ಯೋಜನೆಗಳನ್ನು ಕಾರ್ಯಗತಗೊಳಿಸಲು ಸರ್ಕಾರದ ಇಲಾಖೆಗಳೊಡನೆ ಸಮಾಜದ ವಿವಿಧ ಸಂಘ ಸಂಸ್ಥೆಗಳು ಹಾಗು ಸರ್ಕಾರದ ಸಂಘ ಸಂಸ್ಥೆಗಳೊಡನೆ ಕೈಜೋಡಿಸುತ್ತಿದೆ.

ದಿನೇದಿನೇ ರೈತರು ಅನುಭವಿಸುತ್ತಿರುವ ಬೆಳೆ ನಷ್ಟದಿಂದಾಗುವ ತೊಂದರೆಗಳನ್ನು ರೈತರು ಪರಿಹರಿಸಿಕೊಳ್ಳಲು ಈ ಸಂಸ್ಥೆಯು ಸಹಕಾರಿಯಾಗಿದೆ. ಅಲ್ಲದೆ ರೈತರು ತಾವು ಬೆಳೆಯುವ ಆಹಾರ ಬೆಳೆಗಳ ನಡುವೆ ಆರ್ಥಿಕ ಶಕ್ತಿ ನೀಡುವ ಕೃಷಿ ಅರಣ್ಯವನ್ನು ಹಮ್ಮಿಕೊಳ್ಳಲು ರೈತರಿಗೆ ಮನವರಿಕೆ ಹಾಗು ಪ್ರೇರಣೆ ನೀಡಲು ಸಂಕಿರಣಗಳನ್ನು ಹಮ್ಮಿಕೊಳ್ಳುವುದಲ್ಲದೆ ಗ್ರಾಮಗಳಲ್ಲಿ ಕೃಷಿ ಅರಣ್ಯದ ಬಗ್ಗೆ ನಿರಂತರವಾಗಿ ಅರಿವು ಮೂಡಿಸಲು ಹಲವು ಕಾರ್ಯಕ್ರಮಗಳನ್ನು ಕರ್ನಾಟಕದ ವಿವಿದೆಡೆ ಯಶಸ್ವಿಯಾಗಿ ನಡೆಸಲಾಗಿದೆ.

ಕೃಷಿ ಅರಣ್ಯ ಬೆಳೆಸುವುದರಿಂದ ರೈತರ ಆರ್ಥಿಕಾಭಿವೃದ್ಧಿಯ ಜೊತೆಗೆ ಯುವ ಪೀಳಿಗೆಯನ್ನು ಹಳ್ಳಿಗಳಲ್ಲಿ ಉಳಿಯಲು ಅವಕಾಶ ಮಾಡಿಕೊಡಬಹುದು




ಎನ್ನುವ ನಿಟ್ಟಿನಲ್ಲಿ ಸೆಪ್ಟೆಂಬರ್ 10–11–2015 ರಂದು **"ಕರ್ನಾಟಕದಲ್ಲಿ ಕೃಷಿ ಅರಣ್ಯ ಅವಕಾಶಗಳು,– ಅಡಚರಣೆಗಳು"** ಎರಡು ದಿನದ ವಿಚಾರ ಸಂಕಿರಣ ಆಯೋಜಿಸಿತ್ತು. ಅಲ್ಲಿ ಹಲವು ಕೃಷಿ ಅರಣ್ಯ ಅಭಿವೃದ್ಧಿಯ ಬಗ್ಗೆ ಚರ್ಚೆಗಳು, ಗೋಷ್ಟಿಗಳು, ಸಂವಾದಗಳನ್ನು ನಡೆಸಲಾಯಿತು. ಉಪಯುಕ್ತ ಮತ್ತು ಮಾಡಲೇಬೇಕಾದ ಕೆಲ ನಿರ್ಣಯಗಳನ್ನು ಈ ಸಮಾವೇಶದಲ್ಲಿ ತೆಗೆದುಕೊಳ್ಳಲಾಯಿತು. ಅವುಗಳ ಅನುಷ್ಠಾನಕ್ಕಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಎರಡನ್ನು ಸಂಪರ್ಕಿಸಿ ಒತ್ತಾಯಿಸಲಾಗಿದೆ ಮತ್ತು ಜಾರಿಗೆ ತರಿಸುವಲ್ಲಿ ಶ್ರಮಿಸುತ್ತಿದೆ. ಈ ವಿಚಾರ ಸಂಕಿರಣದಲ್ಲಿ ಮಾಹಿತಿಯುಳ್ಳ ಅನುಭವಯುಕ್ತ ಲೇಖನಗಳನ್ನೊಳಗೊಂಡ **"ಕೃಷಿವನ"** ಸ್ಮರಣ ಸಂಚಿಕೆಯೊಂದನ್ನು ಸಹ ಹೊರತರಲಾಯಿತು.

## ಕೃಷಿ ಅರಣ್ಯ–ರೈತರಿಗೊಂದು ಆಶಾಕಿರಣ

ಕೃಷಿ ಎಂದರೆ ಆಹಾರ ಹಾಗೂ ವಾಣಿಜ್ಯ ಬೆಳೆ ಬೆಳೆಯುವುದು ಮತ್ತು ಪ್ರಾಣಿಗಳನ್ನು ಸಾಕುವುದು. ಬೇಸಾಯ, ಒಕ್ಕಲುತನ, ವ್ಯವಸಾಯ ಎಂಬ ಅರ್ಥವೂ ಇದೆ. ಮಾನವನ ನಾಗರಿಕತೆಯೊಂದಿಗೆ ಕೃಷಿಯೂ ಬೆಳೆದು ಬಂದಿದೆ. ರೈತರು ದೇಶದ ಬೆನ್ನಲಬು. ಇದು ಚಿಕ್ಕವರಿದ್ದಾಗಿಂದ ನಾವೂ ರೈತರ ಮಕ್ಕಳಾಗಿ ಅನುಭವಿಸಿದ ಹಾಗೂ ಕೇಳಿ ಬಂದ ಮಾತಿದು. ನಿಜ ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾದ ಹಸಿವನ್ನು ನೀಗಿಸುವವನೇ ರೈತ. ನಾವು ಏನೇ ಆಹಾರ ತಿಂದರೂ ಅದರ ಹಿಂದೆ ರೈತನ ಶ್ರಮವಿದೆ ಎನ್ನುವುದನ್ನು ಮರೆಯುವಂತಿಲ್ಲ. ಇತ್ತೀಚೆಗೆ ಆರ್ಥಿಕ ಹಿಂಜರಿತಕ್ಕೆ ಭಾರತ ಸಿಲುಕಿರುವುದಕ್ಕೆ ಕೃಷಿ ಪ್ರಮಾಣ ಕಡಿಮೆಯಾಗಿರುವುದೇ ಕಾರಣ ಎನ್ನಲಾಗುತ್ತಿದೆ. ಇದನ್ನು ನೋಡಿದಾಗ ರೈತನ ಅವಶ್ಯಕತೆ, ಪ್ರಾಮುಖ್ಯತೆ ಅರಿವಾಗುತ್ತದೆ. ಕೃಷಿ ಮತ್ತು ರೈತರ ಅಭಿವೃದ್ಧಿಯ ಹೆಸರಿನಲ್ಲಿ ಪ್ರತಿ ವರ್ಷ ಕೊಟ್ಯಾಂತರ ರೂಪಾಯಿ ವೆಚ್ಚ ಸರಕಾರಗಳೂ ಮಾಡುತ್ತಿವೆ.

– ಮುಂದಿನ ಪುಟಕ್ಕೆ...

–ಹಿಂದಿನ ಪುಟದಿಂದ...

ಉದ್ದಾರವಾದವರು ನಮ್ಮನ್ನಾಳುವವರು ಮತ್ತು ಅಧಿಕಾರಿಗಳು. ಆತ್ಮಹತ್ಯೆಗೆ ಶರಣಾದವರು ರೈತರು. ವರ್ಷದಿಂದ ವರ್ಷಕ್ಕೆ ರೈತರ ಆತ್ಮಹತ್ಯೆಗಳು ಹೆಚ್ಚುತ್ತ ಹೋಗಿದೆಯೇ ಹೊರತು ಕಡಿಮೆಯಾಗುತ್ತಿಲ್ಲ. ಹಾಗಾದರೆ ಮೂಲ ಸಮಸ್ಯೆ ಇರುವುದು ಎಲ್ಲಿ? ನಮ್ಮನ್ನಾಳುವವರಲ್ಲಿ ಇರುವ ಬದ್ಧತೆ ಕೊರತೆ. ಅಸಮರ್ಪಕ ಕೃಷಿನೀತಿ. ಇತರೆ ಉದ್ಯಮಿಗಳಿಗೆ ಸಿಕ್ಕ ಪ್ರಾಮುಖ್ಯತೆ ಕೃಷಿಗೆ ಸಿಕ್ಕದಿರುವುದು, ಇತ್ಯಾದಿ.

ರೈತರ ಭಾವನೆಗಳಿಗೆ ಹಾಗು ರೈತರ ಶ್ರೇಯೋಭಿವೃದ್ಧಿಗೆ ಹಾಗು ಸಾಮಾಜಿಕ ಭದ್ರತೆಗೆ ಬುನಾದಿ ಹಾಕಲು ದಿಕ್ಸೂಚಿಯಂತೆ ಇರುವ ಈ ಸಂಸ್ಥೆಯ ಸ್ಥಾಪಕ ಅಧ್ಯಕ್ಷರು ನಿವೃತ್ತ ಐ.ಎಫ್.ಎಸ್. ಅಧಿಕಾರಿ **ಶ್ರೀ.ಎ.ಎಸ್.ಸದಾಶಿವಯ್ಯರವರ** ಕನಸಿನ ಕೂಸು ಕೂಡ ಇದು. ಇವರ ಜೊತೆಗೆ ಹೆಗಲಾಗಿ ನಿಂತಿರುವವರು ಇವರ ಸ್ನೇಹಿತರಾದ ಇನ್ನೊಬ್ಬ ನಿವೃತ್ತ ಐ.ಎಫ್.ಎಸ್. ಅಧಿಕಾರಿ **ಶ್ರೀ.ಎನ್.ಸಂಪಂಗಿರವರು** ಈ ಸಂಸ್ಥೆಯ ಸಹ ಅಧ್ಯಕ್ಷರಾಗಿದ್ದಾರೆ. ಇವರಲ್ಲದೆ ಅನೇಕ ಅರಣ್ಯ ಇಲಾಖೆಯ ನಿವೃತ್ತ ಅಧಿಕಾರಿಗಳು ತಮ್ಮ ಅಪಾರವಾದ ಸೇವೆಯನ್ನು ಇಲ್ಲಿ ಸಲ್ಲಿಸುತ್ತಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷರಾದ **ಶ್ರೀ.ಎ.ಎಸ್. ಸದಾಶಿವಯ್ಯ ರವರು** ಸ್ಮರಿಸುತ್ತಾರೆ. ■






## ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ), ಬೆಂಗಳೂರು

ದೂ: 080 23566126 Email: iaftbangalore@gmail.com





### ಉದ್ದೇಶಗಳು.

- ರೈತರುಗಳಲ್ಲಿ ಶಾಸ್ತ್ರೀಯ ಅರಣ್ಯೀಕರಣವನ್ನು ಪ್ರೋತ್ಸಾಹಿಸುವುದು.
- ಮರ ಆಧಾರಿತ ಕೈಗಾರಿಕೆಗಳು ಮತ್ತು ಇತರೆ ಶಾಸ್ತ್ರೀಯ ಅರಣ್ಯೀಕರಣದ ಬಗ್ಗೆ ಆಸಕ್ತಿ ಇರುವ ಕೈಗಾರಿಕೆಗಳೊಂದಿಗೆ ಸಹಕಾರ ಮತ್ತು ದೃಷ್ಟಿಕೋನವನ್ನು ವಿನಿಮಯ ಮಾಡಿಕೊಳ್ಳುವುದು.
- ಈ ವಿಷಯಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಆಸಕ್ತಿ ಹೊಂದಿರುವವರು ಮತ್ತು ಸರ್ಕಾರದೊಂದಿಗೆ ಒಂದೇ ರೀತಿಯ ಸಮಾಲೋಚನೆ ಮಾಡುವುದು.
- ಶಾಸ್ತ್ರೀಯ ಅರಣ್ಯೀಕರಣಕ್ಕೆ ಸಂಬಂಧಿಸಿದಂತೆ ಸಭೆಗಳು, ಕಾರ್ಯಗಾರಗಳು, ಚರ್ಚೆಗಳು, ಗೋಷ್ಠಿಗಳು, ವಿಚಾರಗಳು ಮತ್ತು ತರಬೇತಿಗಳನ್ನು ಏರ್ಪಡಿಸುವುದು ಮತ್ತು ಶಾಸ್ತ್ರೀಯ ಅರಣ್ಯೀಕರಣದ ವಿಷಯಗಳನ್ನು ಸೇರಿಸಿ ಸಾರ್ವಜನಿಕರಲ್ಲಿ ಆಸಕ್ತಿ ಮೂಡುವಂತೆ ಪ್ರೋತ್ಸಾಹಿಸುವುದು.
- ಶಾಸ್ತ್ರೀಯ ಅರಣ್ಯೀಕರಣದ ಬಗೆಗೆ ಅರಿವು ಮೂಡಿಸಲು ಪುಸ್ತಕಗಳನ್ನು ಪ್ರಕಾಶಪಡಿಸುವುದು ಮತ್ತು ಪ್ರಚಾರ ಮಾಡುವುದು, ಕರಪತ್ರ, ವೃತ್ತಪತ್ರಿಕೆ, ದಾಖಲುಗಳು ಮತ್ತು ಇತರೆ ತಾಂತ್ರಿಕ ನಿಯತಕಾಲಿಕವನ್ನು ಸಿದ್ಧಪಡಿಸುವುದು.
- ವಿದ್ಯಾರ್ಥಿಗಳಿಗೆ, ರೈತರಿಗೆ ಮತ್ತು ತಂತ್ರಜ್ಞರಿಗೆ ಬಿರುದು, ಪ್ರಶಸ್ತಿ ಮತ್ತು ಸನ್ಮಾನ ಮಾಡುವುದು.
- ಚಂದಾ, ದಾನಿಗಳಿಂದ, ಧರ್ಮದರ್ಶಿಗಳಿಂದ, ದತ್ತಿ, ಕೊಡುಗೆಗಳು ಮತ್ತು ಇತರ ಮೂಲಗಳಿಂದ ಧನ ಸಂಪನ್ಮೂಲ ಹೆಚ್ಚಿಸುವುದು.
- ಸಮಯಕ್ಕೆ ತಕ್ಕಂತೆ ಅಗತ್ಯವಿರುವಲ್ಲಿ ಎಲ್ಲ ರೀತಿಯಲ್ಲಿಯೂ ಭಾಗವಹಿಸುವುದು.

# ಸಂಸ್ಥೆಯ 2017- 2018 ನೇ ಸಾಲಿನ ವಾರ್ಷಿಕ ವರದಿ

ಎ.ಎಂ. ಅಣ್ಣಯ್ಯ, ಕಾರ್ಯದರ್ಶಿ
ಕೃಷಿ-ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರು ದೂ: 9980803404

ದಿ. 07.04.2018 ರಂದು ಬೆಂಗಳೂರಿನ ಅರಣ್ಯ ಭವನದಲ್ಲಿ ಕರಡು ರಾಷ್ಟ್ರೀಯ ಅರಣ್ಯ ನೀತಿ 2018 ರ ಬಗ್ಗೆ ಕಾರ್ಯದರ್ಶಿಗಳು PPT ಮೂಲಕ ಕೃಷಿ ಅರಣ್ಯದ ಬಗ್ಗೆ ಕಾರ್ಯಕ್ರಮದಲ್ಲಿ ಮಾಹಿತಿ ನೀಡಿದರು. ಕರ್ನಾಟಕ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗು ನಿವೃತ್ತ ಅರಣ್ಯಾಧಿಕಾರಿಗಳಿಂದ ಈ ಸಭೆಯಲ್ಲಿ ಸಂಸ್ಥೆಯ ಮಾನ್ಯ ಅಧ್ಯಕ್ಷರು ವಿಷಯದ ಬಗ್ಗೆ ವಿಚಾರ ವಿನಿಮಯ ಮಾಡಿದರು.

ದಿ. 21.04.2018 ರಂದು ಸಂಸ್ಥೆಯ ಕಾರ್ಯಕಾರಿಣಿ ಸದಸ್ಯರು ನಿವೃತ್ತ VC (UAS-B) ಡಾ. ಕೆ. ನಾರಾಯಣ ಗೌಡರ ಮುಂದಾಳತ್ವದಲ್ಲಿ **"ಬೆಂಗಳೂರು ಸಂರಕ್ಷಿಸಲು ಸಮಗ್ರ ಪರಿಸರ ಸ್ನೇಹಿ ಯೋಜನೆ"** ಬಗ್ಗೆ PCCF (HoFF) ಅವರ ಸಮ್ಮುಖದಲ್ಲಿ ಅರಣ್ಯ ಭವನದ ಹಿರಿಯ ಅರಣ್ಯಾಧಿಕಾರಿಗಳಿಗೆ ವಿಷಯ ಮಂಡಿಸಿ ಚರ್ಚಿಸಲಾಯಿತು.

ದಿ. 28.04.2018 ರಂದು ಸಂಸ್ಥೆಯ ಅಧ್ಯಕ್ಷರು, ಪದಾಧಿಕಾರಿಗಳು ಹಾಗು ಡಾ. ಕೆ. ನಾರಾಯಣ ಗೌಡರು 'press meet' ಮಾಡಿ ಮಾಧ್ಯಮ ಕ್ಕೆ **"ಬೆಂಗಳೂರು ಸಂರಕ್ಷಿಸಲು ಸಮಗ್ರ ಪರಿಸರ ಸ್ನೇಹಿ ಯೋಜನೆ"** ಬಗ್ಗೆ ತಿಳಿಸಲಾಯಿತು.

ದಿ. 02.06.2018 ರಂದು ಸಂಸ್ಥೆಯ ಕಾರ್ಯದರ್ಶಿಯವರು ನಂಜನಗೂಡಿನ ಹುಲ್ಲಹಳ್ಳಿ ಬಳಿ ಕೃಷಿ ಅರಣ್ಯದಡಿ ಹೆಬ್ಬೇವು ಮರಗಳಡಿಯಲ್ಲಿ **'ಔಷದಿ ಸೌತೆ'** ಬೆಳೆಯುವ ಬಗ್ಗೆ ವಿಚಾರ ವಿನಿಮಯ ಮಾಡಿದರು.

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ದಿ. 05.06.2018 ರಂದು ಕೃಷಿ ವಿಶ್ವ ವಿದ್ಯಾನಿಲಯ, GKVK ಬೆಂಗಳೂರಿನಲ್ಲಿ Registrar Dean ಹಾಗು ವಿದ್ಯಾರ್ಥಿಗಳೊಡನೆ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎ.ಎಸ್. ಸದಾಶಿವಯ್ಯ, ಶ್ರೀ ಎನ್. ಸಂಪಗಿ, ಶ್ರೀ ಆರ್.ಎಮ್. ಪಾಲಣ್ಣ, ಶ್ರೀ ಎನ್.ಡಿ. ತಿವಾರಿ. ಡಾ. ಎಂ. ಮಹದೇವ ಮೂರ್ತಿ, ಕೆ. ಎಸ್. ಆನಂದ ಅವರು ಗಳೊಡನೆ "Beat Plastic Pollution" ಕಾರ್ಯಕ್ರಮ ನಡೆಸಿ ಗಿಡಗಳನ್ನು ನೆಡಲಾಯಿತು.

ದಿ. 06.06.2018 ರಂದು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಸಂಸ್ಥೆ ಅಧ್ಯಕ್ಷರು, Suchitra Cinema & Cultural Academy ಅಧ್ಯಕ್ಷರಾದ ಶ್ರೀ ಕೆ.ವಿ.ಆರ್.ಟ್ಯಾಗೂರ್ IPS (ನಿವೃತ್ತ) ಇವರುಗಳೊಡನೆ ಶಾಲಾ ಮಕ್ಕಳಿಗೆ ಪರಿಸರದ ಬಗ್ಗೆ ಚಿತ್ರ ಬಿಡಿಸಿ ಬಣ್ಣ ಹಚ್ಚುವ ಸ್ಪರ್ಧೆ ಏರ್ಪಡಿಸಿ ಬಹುಮಾನ ವಿತರಿಸಲಾಯಿತು.

ದಿ. 15.06.2018 ರಂದು ಬೆಂಗಳೂರಿನ ಹೆಬ್ಬಾಳದಲ್ಲಿ ಕೃಷಿ ವಿಶ್ವವಿದ್ಯಾನಿಲಯದ Alumini Association ನಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಕಾರ್ಯದರ್ಶಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಕೃಷಿ-ಅರಣ್ಯ, ಮತ್ತು ವನ್ಯ ಜೀವಿ ಸಂರಕ್ಷಣೆ ಬಗ್ಗೆ PPT ಮೂಲಕ ಮಾಹಿತಿ ನೀಡಿದರು.

ದಿ. 21.06.2018 ರಂದು ಸಂಸ್ಥೆಯ ಮಾನ್ಯ ಅಧ್ಯಕ್ಷರು LIONS CLUBS INTERNATIONAL DISTRICT 317A ಸಹಕಾರದೊಂದಿಗೆ ಬೆಂಗಳೂರಿನ ಕನಕಪುರ ರಸ್ತೆಯ ವೈಷ್ಣವಿ ರೆಸಿಡೆನ್ಸಿಯಲ್ಲಿ **'ಶ್ರೀ ಗಂಧ ಮಿತ್ರ'** ಯೋಜನೆಯಡಿ ಶ್ರೀಗಂಧದ ಸಸಿಗಳನ್ನು ವಿತರಿಸಿ ಕೃಷಿ-ಅರಣ್ಯದ ಪ್ರಾಮುಖ್ಯತೆಯನ್ನು ಭಾಗವಹಿಸಿದವರಿಗೆ ಮನವರಿಕೆ ಮಾಡಿದರು.

ದಿ. 29.06.2018 ರಂದು ಸಂಸ್ಥೆಯ ಕಾರ್ಯದರ್ಶಿಗಳು ಧಾರವಾಡದ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಧಾರವಾಡ, ಬೆಳಗಾವಿ ಹಾಗು ಕೆನರಾ ವೃತ್ತದ ರೈತರಿಗೆ ಮತ್ತು ಅಧಿಕಾರಿಗಳಿಗೆ ಏರ್ಪಡಿಸಿದ್ದ **'ಕೃಷಿ ಅರಣ್ಯ'** ಕಾರ್ಯಗಾರದಲ್ಲಿ **"ಹವಾಗುಣ ವೈಪರೀತ್ಯ ಹಾಗು ಆಹಾರ ಭದ್ರತೆಗಾಗಿ ಕೃಷಿ ಅರಣ್ಯ"** ಎಂಬ ವಿಷಯದ ಬಗ್ಗೆ PPT ಮೂಲಕ ವಿಚಾರ ಮಂಡಿಸಿ ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಮಾನ್ಯ ಅರಣ್ಯ ಸಚಿವರು ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಚಿವರಿಗೆ ಸೆಪ್ಟಂಬರ್ 2015 ರ ಕೃಷಿ ಅರಣ್ಯ ವಿಚಾರ ಸಂಕೀರ್ಣದ ಶಿಫಾರಸ್ಸುಗಳನ್ನು ಸರ್ಕಾರದ ಮಟ್ಟದಲ್ಲಿ ಅನುಷ್ಠಾನಗೊಳಿಸಲು ಕೋರಲಾಯಿತು.

ಕೃಷಿ ಅರಣ್ಯಗಾರಿಕೆಯಲ್ಲಿ ಸಮಗ್ರ ಶ್ರೀಗಂಧ ಬೇಸಾಯ, ಮಾರುಕಟ್ಟೆ ಹಾಗು ಬೆಳೆದವರಿಗೆ ಬೋನಸ್, ಸರಳ ವರ್ಗೀಕರಣದ ಬಗ್ಗೆ E.C ಯ ಸದಸ್ಯರು ದಿ. 16.07.2018 ರಂದು PCCF(HoFF) ಅವರನ್ನು ಭೇಟಿ ಮಾಡಿ ಅರಣ್ಯ ಭವನದಲ್ಲಿ ಚರ್ಚಿಸಲಾಯಿತು. **"ಬೆಂಗಳೂರು ಸಂರಕ್ಷಿಸಲು ಸಮಗ್ರ ಪರಿಸರ ಸ್ನೇಹಿ ಯೋಜನೆ"**ಯನ್ನು PCCF(HoFF) ಅವರಿಗೆ ಸಲ್ಲಿಸಿದ್ದು ಸರ್ಕಾರದ ಮಟ್ಟದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕಿದೆ.

ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆದ RAWE ಕಾರ್ಯಕ್ರಮಗಳಲ್ಲಿ ಅಧ್ಯಕ್ಷರು ಮತ್ತು ಸಹ ಕಾರ್ಯದರ್ಶಿಗಳು ಹಾಗು ಸದಸ್ಯರು ಭಾಗವಹಿಸಿ ವಿದ್ಯಾರ್ಥಿಗಳಿಗೆ ಕೃಷಿ ಅರಣ್ಯದ ಬಗ್ಗೆ ಮಾಹಿತಿ ನೀಡಿ ಗಿಡಗಳನ್ನು ಹಂಚುವುದು ಹಾಗು ನೆಡುವ ಕಾರ್ಯಕ್ರಮಗಳನ್ನು ಜರುಗಿಸಲಾಗಿದೆ.

ದಿನಾಂಕ 16.07.2018 ರಂದು ಸಂಸ್ಥೆಯ ಪದಾಧಿಕಾರಿಗಳು ಹಾಗು ಸದಸ್ಯರು, ಅರಣ್ಯ ಭವನದಲ್ಲಿ PCCF(HoFF) ಅವರನ್ನು ಭೇಟಿ ಮಾಡಿ ಶ್ರೀಗಂಧ ಬೆಳೆ ಮತ್ತು ಮಾರುಕಟ್ಟೆ ಸಮಸ್ಯೆ ಬಗ್ಗೆ ಚರ್ಚಿಸಲಾಯಿತು.

ಸಂಸ್ಥೆಯ ಕಾರ್ಯದರ್ಶಿಗಳು ದಿ.27.07.2018 ರಂದು ಬೆಳಗಾವಿ, ಧಾರವಾಡ ಹಾಗು ಕೆನರಾ ಅರಣ್ಯ ವೃತ್ತಗಳ ಕೃಷಿ-ಅರಣ್ಯ ಕಾರ್ಯಗಾರದಲ್ಲಿ ಭಾಗವಸಿ PPT ಮೂಲಕ ರೈತರು ಹಾಗು ಅಧಿಕಾರಿಗಳಿಗೆ **"ಜಾಗತಿಕ ಹವಾಗುಣ ಬದಲಾವಣೆ ನಿಯಂತ್ರಣ ಹಾಗು ಆಹಾರ ಭದ್ರತೆಗಾಗಿ ಕೃಷಿ-ಅರಣ್ಯ"** ಎಂಬ ವಿಷಯವನ್ನು ಮಂಡಿಸಲಾಯಿತು. ಪ್ರಶ್ನೋತರ ಕಾರ್ಯಕ್ರಮದಲ್ಲಿ ಮಾನ್ಯ ಅರಣ್ಯ ಸಚಿವರು ಭಾಗವಹಿಸಿದ್ದು ಅವರಿಗೆ ಸಂಸ್ಥೆಯ ಕೃಷಿ ಅರಣ್ಯ ಕಾರ್ಯಗಾರದ (ಸೆಪ್ಟಂಬರ್ 15) ಶಿಫಾರಸ್ಸುಗಳನ್ನು ಸರ್ಕಾರದ ಮಟ್ಟದಲ್ಲಿ ಅನುಷ್ಠಾನ ಮಾಡಲು ಕೋರಲಾಯಿತು.

ದಿ. 27.07.2018 ರಂದು ಕರ್ನಾಟಕ ಅರಣ್ಯ ಇಲಾಖೆ ಮಂಡ್ಯ

- ಮುಂದಿನ ಪುಟಕ್ಕೆ...

–ಹಿಂದಿನ ಪುಟದಿಂದ...

ವಿಭಾಗದಿಂದ ನಡೆದ **'ಕೃಷಿ ಅರಣ್ಯ'** ಕಾರ್ಯಗಾರದಲ್ಲಿ ಸಂಸ್ಥೆಯ ಕಾರ್ಯದರ್ಶಿಯವರು ಭಾಗವಹಿಸಿ ಕೃಷಿ ಅರಣ್ಯ ಪ್ರಾಮುಖ್ಯತೆ, ಅನುಷ್ಠಾನ ಹಾಗು ವಿಸ್ತರಣೆಯ ಬಗ್ಗೆ ವಿಷಯ ಮಂಡಿಸಲಾಯಿತು. 500 ಕ್ಕೂ ಹೆಚ್ಚು ಕೃಷಿ ತೋಟಗಾರಿಕೆ, ಅರಣ್ಯ ಹಾಗು ರೇಷ್ಮೆ ಇಲಾಖೆ ಅಧಿಕಾರಿ ಸಿಬ್ಬಂಧಿಗಳು ಹಾಗು ರೈತರು ಭಾಗವಹಿಸಿದ್ದರು. APCCF **ಶ್ರೀ ಅಜಯ್ ಮಿಶ್ರ IFS** ಹಾಗು APCCF **ಶ್ರೀಮತಿ ಅನಿತಾ ಅರೆಕಲ್** IFS ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ದಿ. 29.07.2018 ರಂದು ಸಂಸ್ಥೆಯ ಕಾರ್ಯದರ್ಶಿಯವರು ಕರ್ನಾಟಕ ಪಶು ಸಂಗೋಪನೆ, ಪಶು ಮತ್ತು ಮೀನುಗಾರಿಕೆ ವಿಶ್ವ ವಿದ್ಯಾನಿಲಯದ ಹೆಬ್ಬಾಳದ Dairy Centre ನಲ್ಲಿ ಏರ್ಪಡಿಸಿ ಪರಿಸರ ದಿನಾಚರಣೆಯಲ್ಲಿ ಭಾಗವಹಿಸಿ ಗಿಡಗಳನ್ನು ನೆಡಲಾಯಿತು. ಬೆಂಗಳೂರಿನ ಪಶು ವೈದ್ಯ ಕಾಲೇಜಿನ ಡೈರಿ ವಿಭಾಗದ ಮುಖ್ಯಸ್ಥರಾದ ಪ್ರೋ ಚಂದ್ರಶೇಖರ ಇವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ, ಶ್ರೀಯುತ ಜಿ. ಸತೀಶ IFS, ಆಯುಕ್ತರು, ಕೃಷಿ ಇಲಾಖೆ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ನೂರಕ್ಕೂ ಹೆಚ್ಚು ರಾಷ್ಟೀಯ ಸ್ವಯಂ ಸೇವಕರು ಭಾಗವಹಿಸಿದ್ದರು.

ದಿ. 02.08.2018 ರಂದು ಸಂಸ್ಥೆಯ ಅಧ್ಯಕ್ಷರು ಬೆಂಗಳೂರಿನ ಜಯನಗರ ವಿಜಯ ಕಾಲೇಜಿನಲ್ಲಿ 400 NSS ವಿದ್ಯಾರ್ಥಿಗಳೊಡನೆ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಜಯನಗರ ಶಾಸಕರಾದ **ಶ್ರೀಮತಿ ಸೌಮ್ಯ ರೆಡ್ಡಿಯವರು** ಉದ್ಘಾಟನೆಯನ್ನು ಮಾಡಿದರು. ಮುಖ್ಯ ಅತಿಥಿಗಳಾಗಿ ಲಯನ್ಸ್ ಜಿಲ್ಲಾ ಗೌರ್‍ನರ **ಶ್ರೀ ವಿ. ರೇಣುಕುಮಾರ** ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ವಿಜಯ ಕಾಲೇಜು ಜಯನಗರ, ಲಯನ್ಸ ಕ್ಲಬ್, ಬೆಂಗಳೂರು ಹಾಗು ವಸುಂಧರೆ ಸಂಸ್ಥೆಗಳ ಸಹಭಾಗಿತ್ವದಲ್ಲಿ ನಡೆಸಲಾಗಿದೆ.

ದಿ. 08.08.2018 ರಂದು ಸಂಸ್ಥೆಯು ಜನನಿ ಸೇವಾ ಟ್ರಸ್ಟ್, ಟಿ.ನರಸೀಪುರ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಹಾಗು ಬೆಂಗಳೂರು ಮಹಾನಗರ ಲಯನ್ಸ್ ಕ್ಲಬ್ ಸಹಯೋಗದಲ್ಲಿ ಟಿ. ನರಸೀಪುರ ಬಳಿಯ ನೆರಗತನಹಳ್ಳಿಯಲ್ಲಿ ಪೌಷ್ಠಿಕತೆ ಹಾಗು ಔಷದಿ ಗುಣಗಳ ಸಸ್ಯಗಳ ಬಗ್ಗೆ ಮಾನ್ಯ ಅಧ್ಯಕ್ಷರು ವಿವರಣೆ ನೀಡಿ, ಗಿಡಗಳನ್ನು ವಿತರಸಿದರು. ಅಧ್ಯಕ್ಷರಾದ **ಶ್ರೀ ಎ.ಎಸ್. ಸದಾಶಿವಯ್ಯ** ಅವರೊಡನೆ, ಜನನಿ ಸೇವಾ ಸಂಸ್ಥೆಯ ಕಾರ್ಯದರ್ಶಿ **ಡಾ. ಚಂದ್ರು, ಶ್ರೀ ಎ.ಎಸ್. ಗಂಗಾಧರಪ್ಪ,** Lions Clubs International –3170 ಹಾಗು **ಶ್ರೀ ಎ.ಎಸ್.ಜಗದೀಶಯ್ಯ,** ಬೆಂಗಳೂರು ಮಹಾನಗರ ಲಯನ್ಸ ಕ್ಲಬ್‌ನ ಖಜಾಂಚಿಯವರು ಭಾಗವಹಿಸಿದ್ದರು.

ದಿ. 15.08.2018 ರಂದು ನೆಲಮಂಗಲ ತಾ. ಚಿಕ್ಕನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರು, ಬೆಂಗಳೂರಿನ ಅಪೂರ್ವ ಲಯನ್ಸ ಕ್ಲಬ್, ರೈತರು ಗ್ರಾಮ ಪಂಚಯಿತಿ ಹಾಗು ಶಾಲಾ ಸಮಿತಿಯ ಸದಸ್ಯರೊಡನೆ ಭಾಗವಹಿಸಿ ಕೃಷಿ–ಅರಣ್ಯ ಪ್ರೋತ್ಸಾಹ ಯೋಜನೆಯ ಬಗ್ಗೆ ತಿಳಿಸಿ **"ಮನೆಗೊಂದು ಮರ, ಊರಿಗೊಂದು ತೋಪು, ತಾಲ್ಲೂಕಿಗೊಂದು ಕಿರು ಅರಣ್ಯ, ಜಿಲ್ಲೆಗೊಂದು ಕಾಡು"** ಎಂಬ ಘೋಷ ವಾಕ್ಯವನ್ನು ಅನುಷ್ಠಾನಗೊಳಿಸಲು ಪ್ರತಿಜ್ಞಾ ಸ್ವೀಕಾರ ಮಾಡಲಾಯಿತು.

ದಿ. 15.08.2018 ರಂದು ಸಂಸ್ಥೆಯ ಮಾನ್ಯ ಅಧ್ಯಕ್ಷರು Lion Club International ನೊಡನೆ ಸೇರಿ ಮಾನ್ಯ ಮುಖ್ಯ ಮಂತ್ರಿಗಳ **"ಹಸಿರು ಕರ್ನಾಟಕ"** ಹಾಗು Beat Plastic ಬಗ್ಗೆ ಜಾಥಾದಲ್ಲಿ ಭಾಗವಹಿಸಿ ಲಾಲಬಾಗ್‌ನಲ್ಲಿ ಬಂದಿದ್ದ ಸಾವಿರಾರು ಜನರಿಗೆ ಸಂದೇಶ ನೀಡಲಾಯಿತು.

ದಿ 25.08.2018 ರಂದು ದೊಡ್ಡ ಬಳ್ಳಾಪುರದ ರಾಜಾನುಕುಂಟೆ ಹೋಬಳಿಯ ಅಡ್ಡೆ ವಿಶ್ವನಾಥಪುರದಲ್ಲಿ ಸಂಸ್ಥೆಯವರು ಬೃಹತ ಗಿಡ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ 300 ಗಿಡಗಳನ್ನು ನೆಡಲಾಯಿತು. ಈ ಬೃಹತ್ ಕಾರ್ಯಕ್ರಮದಲ್ಲಿ ಜಿಲ್ಲಾ ಲಯನ್ಸ **ಗೌರ್‍ನರ ವಿ.ರೇಣುಕುಮಾರ್,** QCI ಸಲಹೆಗಾರಾರದ **ವೆಂಕಟೇಶ,** IHRI ಹೆಸರಘಟ್ಟದ **ವಿಜ್ಞಾನಿ ಡಾ. ವಸಂತ ಕುಮಾರ್** ಭಾಗವಹಿಸಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿಯ ಅರಣ್ಯಧಿಕಾರಿಗಳು ಹಸಿರು ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರೋತ್ಸಾಹಿಸಿದರು.

ದಿ. 06.09.2018 ಬೆಂಗಳೂರಿನ ವಿವೇಕಾನಂದ ಡಿಗ್ರಿ ಕಾಲೇಜು ವತಿಯಿಂದ ಏರ್ಪಡಿಸಿದ್ದ ಪರಿಸರ ಸ್ನೇಹಿಗಳ ಸಪ್ತಾಹ (06.09.2018 ರಿಂದ 13.09.2018) ಜಾಥಾದಲ್ಲಿ ಸಂಸ್ಥೆ ಅಧ್ಯಕ್ಷರು ಭಾಗವಹಿಸಿ ಮಾಹಿತಿ ನೀಡಿದರು. **ಡಾ. ವೆಂಕಟೇಶ ತುಪ್ಪಿಲ,** QCI ಸಲಹೆಗಾರಾರರು ಜಾಥಾ ಉದ್ಘಾಟಿಸಿದರು. ಕಾರ್ಪೋರೇಟರ್ **ಶ್ರೀ ಮಂಜುನಾಥ್,** ಜನತಾ ಶಿಕ್ಷಣ ಸಂಸ್ಥೆಯ **ಶ್ರೀ ನಾರಾಯಣ ಗೌಡರು** ಹಾಗು ನಗರ ಲಯನ್ಸ ಕ್ಲಬ್‌ಗಳ ಪರಿಸರ ಘಟಕಗಳ ಪರಿಸರ ಸ್ನೇಹಿ ಗಣಪತಿ ಉತ್ಸವದ ಬಗ್ಗೆ ವಿದ್ಯಾರ್ಥಿಗಳಿಂದ ಸಾವಿರಾರು ಕರಪತ್ರಗಳನ್ನು ವಿತರಿಸಲಾಯಿತು.

ದಿ. 14.09.2018 ರಂದು ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಗುಡಿಬಂಡೆ ತಾಲ್ಲೂಕಿನ ಚಿಕ್ಕನೆಂಚರಲಿ, ಹಾಗು ಕೋಡವಲಹಳ್ಳಿ ಹಾಗು ಚಿಕ್ಕಬಳ್ಳಾಪುರ ತಾಲ್ಲೂಕಿನ ಬೋದಿನಾರೆನಹಳ್ಳಿಗಳಲ್ಲಿ RAWE ಕಾರ್ಯಕ್ರಮದಲ್ಲಿ ಮಾನ್ಯ ಅಧ್ಯಕ್ಷರು, ಬೆಂಗಳೂರು ಲಯನ್ಸನ **ಶ್ರೀ ಎ.ಎಸ್. ಗಂಗಾಧರಪ್ಪ,** IAFT ಸದಸ್ಯರಾದ **ಡಾ ಮಹಾಲಿಂಗಪ್ಪ** ಇವರೊಡನೆ ಭಾಗವಹಿಸಿ ರೈತರಿಗೆ 400 ಹಣ್ಣಿನ ಮತ್ತು ಇತರ ಸಸಿಗಳನ್ನು ಹಂಚಿಕೆ ಮಾಡಿ ಗಿಡಗಳನ್ನು ನೆಡಲಾಯಿತು. ಕಾರ್ಯಕ್ರಮದಲ್ಲಿ ಚಿಕ್ಕಬಳ್ಳಾಪುರ ಸಾಮಾಜಿಕ ಅರಣ್ಯದ ಉಪ ಅರಣ್ಯ ಸಂರಕ್ಷಣಾಧಿಕಾರಿ **ಶ್ರೀ ಜಿ. ಶ್ರೀನಾಥ** ಹಾಗು ವಲಯ ಅರಣ್ಯಾಧಿಕಾರಿಗಳಾದ **ಕುಮಾರಿ ದಿವ್ಯಾ** ಹಾಗು **ಶ್ರೀಮತಿ ಪೂರ್ವಿಕರಾಣಿ** ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ದಿ 23.09.2018 ರಂದು ಟಿ. ನರಸಿಪುರದ ಕೊನಗನಹಳ್ಳಿಯಲ್ಲಿ ಸಂಸ್ಥೆಯ ಅಧ್ಯಕ್ಷರು **ಶ್ರೀಯುತ ಕೆ.ವಿ.ಆರ್. ಟ್ಯಾಗೊರ್** IPS(ನಿವೃತ್ತ) ಅವರೊಡನೆ ಟಿ. ನರಸೀಪುರದ ಜನನಿ ಸಂಸ್ಥೆ ಹಾಗು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯವರು ಆಯೋಜಿಸಿದ್ದ ಕೃಷಿ–ಅರಣ್ಯ ವಿಸ್ತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸ್ವಸಹಾಯ ಗುಂಪಿನ 150 ಮಹಿಳೆಯರಿಗೆ 300 ಪೌಷ್ಠಿಕ ಆಹಾರ ನೀಡುವ ಗಿಡಗಳನ್ನು ನೀಡಿ ಗ್ರಾಮಸ್ಥರಿಗೆ ಮಾಹಿತಿ ನೀಡಲಾಯಿತು.

ದಿ 16–10–2018 ರಂದು ಗುಲ್ಬರ್ಗದಲ್ಲಿ ಅಗ್ರಿಫಾರೆಸ್ಟ್ರಿ ಮೇಲೆ ಕಾರ್ಯಾಗಾರ ಗುಲ್ಬರ್ಗ ಮತ್ತು ಬಳ್ಳಾರಿ ಅರಣ್ಯ ವಲಯದಿಂದ ಜಂಟಿಯಾಗಿ ಆಯೋಜಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ರೈತರು, ಅಧಿಕಾರಿಗಳು ಮತ್ತು ಜನರ ಪ್ರತಿನಿಧಿಗಳು ಭಾಗವಹಿಸಿದ್ದರು. ಅರಣ್ಯ ಸಚಿವರು ಉದ್ಘಾಟಿಸಿದರು ಮತ್ತು

– ಮುಂದಿನ ಪುಟಕ್ಕೆ...

-ಹಿಂದಿನ ಪುಟದಿಂದ...

ಸ್ಥಳೀಯ ಶಾಸಕರು ಕೂಡ ಉಪಸ್ಥಿತರಿದ್ದರು. 500 ಕ್ಕಿಂತ ಹೆಚ್ಚು ರೈತರು ಕಾರ್ಯಾಗಾರದಲ್ಲಿ ಭಾಗವಹಿಸಿದರು. ಎರಡು ವಲಯಗಳ ಯಶಸ್ವಿ ಕೃಷಿ ಭೂಮಿ ರೈತರಿಗೆ ಸನ್ಮಾನಿಸಲಾಯಿತು. IAFT ಅಧ್ಯಕ್ಷ ಮತ್ತು ಕಾರ್ಯದರ್ಶಿ ಗಳನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಹ್ವಾನಿಸಲಾಯಿತು. ರೈತರೊಂದಿಗೆ ಉತ್ತಮ ಸಂವಾದಾತ್ಮಕ ಚರ್ಚೆಗಳೊಂದಿಗೆ ಕೃಷಿ ಭೂಮಿಯನ್ನು ಸಂಪೂರ್ಣ ಗ್ರಾಮಟ್ಟ ವ್ಯಾಪ್ತಿಗೆ ನಾವು ಹೊಂದಿದ್ದೇವೆ. ದೊಡ್ಡ ಸಂಖ್ಯೆಯಲ್ಲಿ ರೈತರು ಮೊದಲ ಬಾರಿಗೆ ಸ್ಯಾಂಡಲ್ ಹೆಬ್ಬೇವನ್ನು ಬೆಳೆಯುವಲ್ಲಿ ಆಸಕ್ತಿ ತೋರಿಸಿದ್ದಾರೆ. ಕೃಷಿ ವಿಶ್ವವಿದ್ಯಾಲಯದ **ಪ್ರೊಫೆಸರ್ ಜಿ.ಎನ್.ನಾಗರಾಜ್** ಅವರು ವಿವಿಧ ಕೃಷಿ ಮಾದರಿಯ ಬಗ್ಗೆ ಮಾತನಾಡಿದರು. ಒಟ್ಟಾರೆಯಾಗಿ ಇದು ಅತ್ಯಂತ ಫಲದಾಯಕ ಕಾರ್ಯಾಗಾರಗಳಲ್ಲಿ ಒಂದಾಗಿದೆ. ■

## ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ) ನಡೆಸಿದ ವಿವಿಧ ಚಟುವಟಿಕೆಗಳ ಚಿತ್ರಸಂಪದ



# ಶ್ರೀಗಂಧದ ಬೇಸಾಯ ಮತ್ತು ಆರೋಗ್ಯ ವರ್ಧಕ ಗುಣಗಳು:

ಡಾ. ಎನ್. ಸ್ವಾಮಿರಾವ್– 9880101200
ಡಾ. ಎಂ. ಮಹಾದೇವ ಮೂರ್ತಿ–9845588203

## "ಪರಿಸರ ಸ್ನೇಹಿ ಶ್ರೀಗಂಧದ ಮರ"

ಶ್ರೀಗಂಧದ ಮರ ನಮಗೆ ದೇವರು ಕೊಟ್ಟ ಅದ್ವಿತೀಯ ವರ. ಚಂದನದ ಬೇಸಾಯ ಸ್ವಸ್ಥ ಮತ್ತು ಸಮೃದ್ಧ ಸಮಾಜಕ್ಕೆ ಜೀವನಾಧಾರ"

ಶ್ರೀಗಂಧ ಅಥವಾ ಶ್ವೇತ ಚಂದನವೆಂದು ಹೆಸರು ವಾಸಿಯಾಗಿರುವ ಈ ಮರದ ತವರು ಭಾರತ. ನಮ್ಮ ರಾಜ್ಯದ ದಕ್ಷಿಣ ಭಾಗದ ಅರಣ್ಯಗಳಲ್ಲಿ ಈ ಮರ ನೈಸರ್ಗಿಕವಾಗಿ ಬೆಳೆಯುವದನ್ನು ನಾವು ಕಾಣಬಹುದು. ಶ್ರೀಗಂಧ ಒಂದು ಅಪರೂಪದ ಮರ, ಇದರ ಬೇರು, ಎಲೆ, ಕಾಂಡ, ತೊಗಟೆ ಮತ್ತು ಬೀಜಗಳಲ್ಲಿ ಸುಗಂಧ ಭರಿತ ಮತ್ತು ಔಷದೀಯ ಗುಣಗಳುಳ್ಳ ರಾಸಾಯನಿಕ ದ್ರವ್ಯಗಳು ಅಡಗಿವೆ, ಅದರಲ್ಲೂ ಪ್ರಮುಖವಾಗಿ **'ಆಲ್ಫಾ ಮತ್ತು ಬೀಟ'** ಸಾಂಟಲಾಲ್ ಎಂಬ ರಾಸಾಯನಿಕ ದ್ರವ್ಯಗಳು ನಮ್ಮ ಆರೋಗ್ಯ ವರ್ಧನೆಗೆ, ಮನಸ್ಸಿನ ಸ್ಥಿಮಿತಕ್ಕೆ, ಕೋಪ ಶಮನಕ್ಕೆ ಮತ್ತು ಅರ್ಬುದ ರೋಗದಿಂದ ರಕ್ಷಣೆ ಪಡೆಯಲು ಬಹಳ ಸಹಕಾರಿಯಾಗಿವೆ.

ಆರ್ಥಿಕವಾಗಿ ಲಾಭದಾಯಕವಾದ ಶ್ರೀಗಂಧದ ಮರವನ್ನು ಸಣ್ಣ ಮತ್ತು ಅತಿ ಸಣ್ಣ ರೈತರು ಕೂಡ ತಮ್ಮ ಒಕ್ಕಲು ಭೂಮಿಯ ಅಂಚಿನಲ್ಲಿ ಕೆಲವು ಮರಗಳನ್ನು ಬೆಳೆದು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದು. ನೈಸರ್ಗಿಕವಾಗಿ ನಮ್ಮ ರಾಜ್ಯದಲ್ಲಿ ಯಥೇಚ್ಚವಾಗಿ ಬೆಳೆಯವ ಈ ಅರಣ್ಯ ಸಂಪತ್ತಿಗೆ ಕಳ್ಳ ಕಾಕರ ಕಾಟ ಜಾಸ್ತಿ, ಹೀಗಾಗಿ ಬಹು ಪಾಲು ಮರಗಳು ಕಾಡಿನಿಂದ ಕಣ್ಮರೆಯಾಗುತ್ತಿವೆ. ಆರ್ಥಿಕವಾಗಿ ಪ್ರಮುಖವಾಗಿರುವ ಬಹು ಉಪಯೋಗಿ ಶ್ರೀಗಂಧದ ಮರಗಳನ್ನು ಮನೆ ತೋಟಗಳಲ್ಲಿ, ಹೊಲಗದ್ದೆಗಳ ಬದುಗಳ ಮೇಲೆ ಮತ್ತು ಎಲ್ಲೆಲ್ಲಿ ಸ್ಥಳಾವಕಾಶ ಮತ್ತು ರಕ್ಷಣೆ ಇದೆಯೋ ಅಲ್ಲಲ್ಲಿ ಬೆಳೆಯಲು ಪ್ರೋತ್ಸಾಹಿಸಿದರೆ ಆರೋಗ್ಯದಾಯಕ ಮತ್ತು ಸಂಪದ್ಭರಿತ. ಜೀವನಕ್ಕೆ ಆಧಾರವಾಗುತ್ತದೆ. ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಸಹಕಾರಿಯಾಗಿ, ಪರಿಸರದಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವ **ಇಂಗಾಲಾಮ್ಲ** ಮುಂತಾದ ವಿಷ ವಾಯಗಳನ್ನು ಹೀರಿಕೊಂಡು ಪರಿಸರವನ್ನು ಶುದ್ದಗೊಳಿಸಿ ವಾತಾವರಣದ ಸ್ವಚ್ಚತೆಯನ್ನು ರಕ್ಷಿಸಲು ಬಹು ಮಟ್ಟಿಗೆ ಸಹಕಾರಿಯಾಗುತ್ತದೆ.

## ಶ್ರೀಗಂಧದ ಬೆಳೆಗೆ ಸೂಕ್ತವಾದ ಹವಾಗುಣ ಮತ್ತು ಮಣ್ಣು:

ಮರಗಳು ಸಮುದ್ರ ಮಟ್ಟದಿಂದ 600 ರಿಂದ 1050 ಮೀ ಎತ್ತರದವರೆಗೆ ಬೆಳೆಯುತ್ತವೆ. 150 ಸೆಂ.ಮೀ ಮಳೆ ಹಾಗೂ ಸರಾಸರಿ 20ಡಿ ಸೆ.ಗ್ರೇಡ್ ವಾತಾವರಣವಿರುವ ಸಾಧಾರಣ ಮಳೆ ಬೀಳುವ ಹೆಚ್ಚು ಬಿಸಿಲು ಮತ್ತು ವರ್ಷದ ಹೆಚ್ಚು ಸಮಯ ಒಣಹವೆ ಇರುವ ಪ್ರದೇಶಗಳು ಈ ಬೆಳೆಗೆ ಸೂಕ್ತ. ಗಂಧದ ಮರಗಳು ಸಾರವತ್ತಾದ ಆದ್ರತೆಯುಳ್ಳ ಮಣ್ಣಿನಲ್ಲಿ ಬೆಳೆಯುವಂತೆ ಮೆಕ್ಕಲು ಮಣ್ಣು ಅಥವಾ ಕಬ್ಬಿಣಾಂಶ ಕೂಡಿದ ಕೆಂಪುಗೋಡು ಮಣ್ಣಿನಲ್ಲೂ ಸೊಂಪಾಗಿ ಬೆಳೆಯತ್ತವೆ. ನೀರಾವರಿ ಇದ್ದಲ್ಲಿ ಮರಗಳನ್ನು ಸಮೃದ್ಧವಾಗಿ



ಬೆಳೆಯಬಹುದು, ಆದರೆ ನೀರಾವರಿಯಲ್ಲಿ ಬೆಳೆದ ಮರಗಳಲ್ಲೂ ಬಿಳಿ ಮರದ (ಸ್ಯಾಪ ಉಡ್) ಅಂಶ ಹೆಚ್ಚಾಗಿದ್ದು, ಚೇಗು ಕಡಿಮೆಯಾಗಿರತ್ತದೆ. ಗಂಧದ ಸುಗಂಧ ತೈಲ ಚೇಗಿನ ಮರದಲ್ಲಿ ಹೆಚ್ಚಾಗಿರುವದರಿಂದ ವಾಣಿಜ್ಯ ದೃಷ್ಟಿಯಿಂದ ನೀರಾವರಿಯಲ್ಲಿ ಬೆಳೆಯುವದು ಅಷ್ಟು ಲಾಭದಾಯಕವಲ್ಲ. ಆದರೂ ಬೇಸಿಗೆಯಲ್ಲಿ ತಾಪಮಾನ ಅತಿ ಹೆಚ್ಚಾಗಿ ನಮ್ಮ ರಾಜ್ಯದ ಕೆಲವು ಪ್ರದೇಶಗಳಲ್ಲಿ ಗಂಧದ ಮರದ ಬೆಳವಣಿಗೆ ಕುಂಠಿತವಾಗಬಹುದು. ಅಂತಹ ಪ್ರದೇಶಗಳಲ್ಲೂ ಗಂಧದ ಮರಗಳ ಬೇಸಾಯವನ್ನು ಹನಿ ನೀರಾವರಿಯಲ್ಲಿ ಮಾಡಬಹುದು. ಇತ್ತೀಚೆಗೆ ಹನಿ ನೀರಾವರಿಯಲ್ಲಿ ಗಂಧದ ಮರಗಳನ್ನು ಲಾಭದಾಯಕವಾಗಿ ಬೆಳೆಯಬಹುದು ಎಂಬ ಅಂಶ ಕಂಡು ಬಂದಿದೆ.

## ಸಸಿಗಳನ್ನು ಬೆಳೆಸುವ ಕ್ರಮಗಳು:

ಶ್ರೀಗಂಧದ ಸಸಿಗಳನ್ನು ಸಾಮಾನ್ಯವಾಗಿ ಬೀಜಗಳಿಂದ ವೃದ್ಧಿ ಮಾಡಲಾಗುತ್ತದೆ. ಬೀಜಗಳನ್ನು ನವೆಂಬರ್–ಡಿಸೆಂಬರ್ ತಿಂಗಳಲ್ಲಿ ದೊರಕುವ ಹಣ್ಣುಗಳಿಂದ ಪಡೆಯಬಹುದು. ಹಣ್ಣಿನಿಂದ ತೆಗೆದ ಬೀಜಗಳನ್ನು 4–5 ಗಂಟೆಯ ಕಾಲ ನೀರಿನಲ್ಲಿ ನೆನಸಬೇಕು, ಹೀಗೆ ಉಪಚರಿಸಿದ ಬೀಜಗಳನ್ನು ಮರಳು ಮಿಶ್ರಿತ ಮಣ್ಣಿನಿಂದ ತುಂಬಿದ ಪಾಲಿಥಿನ್ ಚೀಲಗಳಲ್ಲಿ ಆಶ್ರಿತ ಬೀಜಗಳ ಜೊತೆ ನೆಡಬೇಕು. ನೆಟ್ಟ ಸುಮಾರು 90 ದಿನಗಳಲ್ಲಿ ಬೀಜಗಳು ಮೊಳಕೆ ಒಡೆಯುತ್ತವೆ. ಸಸಿಗಳು 25–30 ಸೆ.ಮೀ ಎತ್ತರ ಬೆಳೆದಾಗ ಸೂಕ್ತ ಸ್ಥಳದಲ್ಲಿ ನೆಡಬೇಕು. ಎಳೆಯ ಸಸಿಗಳು ನೆಟ್ಟ ನಂತರ ಗಿಡಗಳ ಸುತ್ತಲು ಮುಳ್ಳು ಪೊದೆ ಹಾಕಿ ಮೇಯುವ ದನಗಳಿಂದ ರಕ್ಷಿಸಬೇಕು.

## ಪರೋಪ ಜೀವಿ ಶ್ರೀಗಂಧ:

ಗಂಧದ ಮರವು ಆಶ್ರಿತ ಮರಗಳ ಬೇರಿನೊಂದಿಗೆ **'ಬಟ್ಟಲಿನ ಆಕಾರದ ಹಾಸ್ಟೋರಿಯ'** ಗಳ ಮೂಲಕ ಸಂಬಂಧವಿರಿಸಿಕೊಂಡು **'ಬೇರು ಪರೋಪಜೀವಿ'** ಎಂದು ಕರೆಯಲ್ಪಡುತ್ತದೆ. ಗಂಧದ ಮರಗಳಿಗೆ ಸೀಮೆತಂಗಡಿ

– ಮುಂದಿನ ಪುಟಕ್ಕೆ...

- ಹಿಂದಿನ ಪುಟದಿಂದ

ಮತ್ತು ಹೊಂಗೆ ಉತ್ತಮವಾದ ಆಶ್ರಿತ ಮರಗಳೆಂದು ಅಭಿಪ್ರಾಯ ಪಡಲಾಗಿದೆ. ಗಂಧದ ಮರವು ತನ್ನ ಬೇರುಗಳಿಂದ ಮಣ್ಣಿನಲ್ಲಿನ ಸುಣ್ಣ ಹಾಗೂ ಪೋಟ್ಯಾಷ್ ಅಂಶವನ್ನು ಹೀರಿಕೊಳ್ಳುತ್ತದೆ. ತನ್ನ ಆಶ್ರಯ ಮರಗಳಿಂದ ಸಾರಜನಕ ಮತ್ತು ರಂಜಕಗಳನ್ನು ದೊರಕಿಸಿಕೊಳ್ಳುತ್ತದೆ. ಕೆಲವು ಸಂದರ್ಭಗಳಲ್ಲಿ ಒಂದು ಗಂಧದ ಮರ ಇನ್ನೊಂದು ಗಂಧದ ಮರದ ಬೇರನ್ನು ಆಶ್ರಯಿಸುವುದುಂಟು.

## ಅಮೂಲ್ಯ ಆರೋಗ್ಯ ವರ್ಧಕ:

ಶ್ರೀಗಂಧದ ತೈಲ ಅನೇಕ ರೋಗ ರುಜಿನಗಳಿಗೆ ಸಿದ್ಧೌಷದ. ಇದರ ಸತ್ವ ಭರಿತ ತೈಲದಿಂದ ಸಾಮಾನ್ಯವಾಗಿ ಬರುವ ಚರ್ಮ ರೋಗಗಳಾದ ಕಜ್ಜಿ ತುರಿಕೆ ಮುಂತಾದವುಗಳನ್ನು ಗುಣಪಡಿಸಬಹುದು. ಅಲ್ಲದೆ ಅರ್ಬುದ ರೋಗ, ಹೃದಯ ಸಂಭಂಧಿ ರೋಗಗಳು, ಅಲ್ಸರ್, ಕಣ್ಣಿನ ಕಾಯಿಲೆಗಳು, ರಕ್ತದ ಒತ್ತಡ, ಮತ್ತು ವೈರಸ್, ಬ್ಯಾಕ್ಟೀರಿಯ ಮತ್ತು ಶೀಲಿಂದ್ರಗಳಿಂದ ಉಂಟಾಗುವ ಅನೇಕ ರೋಗಗಳನ್ನು ವಾಸಿ ಮಾಡಬಹುದು.

ಸುವಾಸನಾ ಭರಿತ ಶ್ರೀಗಂಧದ ತೈಲ ಮನೆಯ ವಾತಾವರಣವನ್ನು ಶಾಂತ ಮತ್ತು ಉಲ್ಲಾಸ ಭರಿತವನ್ನಾಗಿಸುತ್ತದೆ. ಅಲ್ಲದೆ ಕೋಪ ತಾಪಗಳನ್ನು ಶಮನ ಮಾಡುತ್ತದೆ. ಶ್ರೀಗಂಧದ ಮರಗಳು ಪರಿಸರ ರಕ್ಷಣೆಯಲ್ಲಿಯೂ ಸಹ ಮಹತ್ವದ ಪಾತ್ರವಾಗಿಸುತ್ತವೆ. ವಿಷವಾಯು ಉಗುಳುವ ಉದ್ಧಿಮೆಗಳ ಸುತ್ತ ಮುತ್ತ ಶ್ರೀಗಂಧದ ಮರಗಳನ್ನು ಬೆಳೆದು ವಾಯು ಮಲೀನತೆಯನ್ನು ಕಡಿಮೆ ಮಾಡಬಹುದು, ಅಲ್ಲದೆ ಗುಂಪಾಗಿ ಬೆಳೆಯುವ ಮರಗಳು ವರ್ಷವಿಡೀ ಹಿತಕರ ವಾತವರಣವನ್ನು ಸೃಷ್ಟಿಸುತ್ತವೆ.

## ಮರದ ಕಟಾವು ಮತ್ತು ಇಳುವರಿ:

ಶ್ರೀಗಂಧದ ಮರ ಬಹಳ ಮಂದಗತಿಯಲ್ಲಿ ಬೆಳೆಯುವ ಮರ. ಅದು ವರ್ಷಕ್ಕೆ ಒಂದು ಸೆ.ಮೀ. ವ್ಯಾಸದಂತೆ ಬೆಳೆಯುತ್ತದೆ. ಆದರೂ ಅನುಕೂಲಕರ ವಾತಾವರಣದಲ್ಲಿ ಬೇಗನೆ ಬೆಳೆಯುತ್ತದೆ. ವಾಣಿಜ್ಯ ದೃಷ್ಟಿಯಿಂದ ಬೇಕಾಗುವ ಕಾಂಡದ ಚೇಗು ಭಾಗ (ಹಾರ್ಟವುಡ್) 20 ವರ್ಷಗಳ ನಂತರ ವರ್ಷಕ್ಕೆ 1 ಕೆ.ಜಿ ಯಂತೆ ರೂಪಗೊಳ್ಳುತ್ತದೆ. 30 ವರ್ಷದ ಮರ 0.5 ಮೀ. ವ್ಯಾಸವನ್ನು ಹೊಂದಿದ್ದು ಸರಾಸರಿ 40 ಕೆ.ಜಿ ಸುವಾಸಿತ 'ಚೇಗು ಮರವನ್ನು (ಹಾರ್ಟವುಡ್) ಕೊಡುತ್ತದೆ. ಸುವಾಸಿತ ಚೇಗಿನ ಮರದ ಭಾಗದಲ್ಲಿ ಶೇ. 4–6 ರಷ್ಟು ಗಂಧದ ಎಣ್ಣೆ ದೊರಕುತ್ತದೆ. ಕಾಂಡದ ಮೇಲ್ಭಾಗವನ್ನು (ಸ್ಯಾಪ್ ಉಡ್) ಕೆತ್ತನೆ ಕೆಲಸಕ್ಕೂ ಮತ್ತು ಅದರ ಪುಡಿಯನ್ನು ಅಗರಬತ್ತಿ ತಯಾರಿಕೆಯಲ್ಲೂ ಬಳಸಲಾಗುತ್ತದೆ. ಮರದ ತೊಗಟೆ ಶೇ 12 ರಿಂದ 14 ಭಾಗ ಟ್ಯಾನಿನ್ ಅಂಶವನ್ನು ಹೊಂದಿದ್ದು, ಟ್ಯಾನಿಂಗ್ ಉದ್ಯಮದಲ್ಲಿ ಲಾಭದಾಯಕವಾಗಿ ಕಂಡು ಬಂದಿದೆ. ಗಂಧದ ಮರದ ಬೀಜಗಳಿಗೂ ಮಾರುಕಟ್ಟೆಯಲ್ಲಿ ಒಳ್ಳೆಯ ಬೇಡಿಕೆ ಇದೆ.

ಒಟ್ಟಿನಲ್ಲಿ ಹೇಳುವುದಾದರೆ ಶ್ರೀಗಂಧ ಮರದ ಬೇಸಾಯ ರೈತರಿಗೆ ಲಾಭದಾಯಕ ಬೆಳೆ ಅದರಲ್ಲೂ ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಇದರ ಬೇಸಾಯ ವರದಾನವಾಗಿದೆ. ■

### ಪತ್ರಿಕೆಯಲ್ಲಿ ಪ್ರಕಟಣೆಯಾದ ವರದಿಗಳು



"ಕೃಷಿವನ" ಜನವರಿ, ಫೆಬ್ರವರಿ, ಮಾರ್ಚ -2019 ತ್ರೈಮಾಸಿಕ ವಾರ್ತಾಪತ್ರ

# ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೋ) ಆಡಳಿತ ಮಂಡಳಿ


ಶ್ರೀ ಎ.ಎಸ್. ಸದಾಶಿವಯ್ಯ,


ಶ್ರೀ ಎಸ್. ಸಂಪಂಗಿ,


ಶ್ರೀ ಆರ್.ಎಮ್. ಪಾಲಣ್ಣ,


ಶ್ರೀ ಎ.ಎಂ. ಅಣ್ಣಯ್ಯ,


ಡಾ. ಎಮ್. ಮಹದೇವ ಮೂರ್ತಿ,


ಶ್ರೀ ಕೆ.ಎಸ್. ಆನಂದ್,


ಡಾ. ಎಮ್. ಮಹಾದೇವಪ್ಪ


ಶ್ರೀ ಎನ್.ಡಿ ತಿವಾರಿ,


ಶ್ರೀ ಬಿ. ಶಿವನಗೌಡ,


ಶ್ರೀ ನಾಗರಾಜ,


ಶ್ರೀ ಡಾ॥ ಎನ್. ಸ್ವಾಮಿ ರಾವ್,


ಶ್ರೀಮತಿ ಶೋಭ. ಎಚ್.ಜಿ,


ಶ್ರೀ ಸಿದ್ದೇಗೌಡ,


ಶ್ರೀ ಎಸ್. ನಾರಾಯಣ ಸ್ವಾಮಿ,


ಶ್ರೀ ಬಿ.ಎಸ್. ರಘುನಾಥ,

## ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೋ) ನಡೆಸಿದ ವಿವಿಧ ಚಟುವಟಿಕೆಗಳ ಚಿತ್ರಗುಚ್ಛ



## ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ) ನಡೆಸಿದ ವಿವಿಧ ಚಟುವಟಿಕೆಗಳ ಚಿತ್ರಗುಚ್ಛ



**KRUSHI VANA** ***trimonthly news* letter** January - March

ವಿಳಾಸ : "ಕೃಷಿವನ" ತ್ರೈಮಾಸಿಕ ಪತ್ರಿಕೆ, ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ) ವನವಿಕಾಸ, ನೆಲಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003 ದೂ: 080 23566126 Email: iaftbangalore@gmail.com